ದಿನಾಂಕಃ 17-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ 3 ಮತ್ತು 4 ರವರ ವಕೀಲರಿಂದ,

1) ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಕನ್ನಡ ಮತ್ತು ಆಂಗ್ಲಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಮಂಜನಹಳ್ಳಿ ಗ್ರಾಮದಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ನಾನು ಸುಮಾರು 15 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದೇನೆ. ನಾನು ವ್ಯವಸಾಯ ಮಾಡುತ್ತಿರುವ ಆಸ್ತಿಯ ಸರ್ವೇ ನಂ. 46/1 ಆಗಿರುತ್ತದೆ. ಸದರಿ ಆಸ್ತಿಯ ವಿಸ್ತೀರ್ಣ 3 ಎಕರೆ 6 ಗುಂಟೆ ಇರುತ್ತದೆ.

2) 15 ವರ್ಷಗಳ ಹಿಂದೆ ಸದರಿ ಆಸ್ತಿಯಲ್ಲಿ ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನಾನು ಸರ್ವೇ ನಂ. 46/1 ಆಸ್ತಿಯ ಪಹಣಿ ಪತ್ರಿಕೆ ನೋಡಿರುತ್ತೇನೆ. ನಾನು ಸದರಿ ಆಸ್ತಿಗೆ ಕಂದಾಯವನ್ನು ಪಾವತಿ ಮಾಡಿರುವುದಿಲ್ಲ. ನನ್ನ ತಂದೆ ಪಾವತಿ ಮಾಡಿರುತ್ತಾರೆ. ಸರ್ವೇ ನಂ. 46/1 ಆಸ್ತಿಯ ಪಹಣಿ ಪತ್ರಿಕೆ ನನ್ನ ತಂದೆ ಹೆಸರಿನಲ್ಲಿ ಇರುತ್ತದೆ. ಗಣಕೀಕೃತ ಪಹಣಿ ಪತ್ರಿಕೆ ಜಾರಿಗೆ ಬರುವವರೆಗೂ ನನ್ನ ತಂದೆಯ ಹೆಸರಿನಲ್ಲಿ ಪಹಣಿ ಪತ್ರಿಕೆ ನಮೂದು ಇರುತ್ತದೆ. ಈಗಲೂ ಸಹ ಪಹಣಿ ಪತ್ರಿಕೆ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ನನ್ನ ತಂದೆ ಹೆಸರಿನಲ್ಲಿ ಸರ್ವೇ ನಂ. 46/1 ರಲ್ಲಿ 3 ಎಕರೆ 6 ಗುಂಟೆ ವಿಸ್ತೀರ್ಣಕ್ಕೆ ಪಹಣಿ ಇರುತ್ತದೆ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿರುತ್ತದೆ.

3) ನಿಶಾನೆ ಪಿ-19 ಪಹಣಿ ಪತ್ರಿಕೆಯ ಕಾಲಂ ನಂ. 9 ರಲ್ಲಿ ದೂಳಿಸತ್ಯನಾರಾಯಣ ಎಂದು ನಮೂದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನಿಶಾನೆ ಪಿ-1 ಕ್ರಯಪತ್ರವನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ನಿಶಾನೆ ಪಿ-1 ಕ್ರಯ ಪತ್ರದಲ್ಲಿ ಇರುವ ಆಸ್ತಿಯನ್ನು ಜವರೇಗೌಡ ರವರಿಂದ ಖರೀದಿ ಮಾಡಿರುತ್ತಾರೆ. ನಿಶಾನೆ

ಪಿ-1

ಕ್ರಯ ಪತ್ರದಲ್ಲಿ ಸರ್ವೇ ನಂ. 46 ಎಂದು ನಮೂದು ಆಗಿರುತ್ತದೆ. ಸರ್ವೇ ನಂ. 46 ರಲ್ಲಿ 5 ಎಕರೆ 19 ಗುಂಟೆ ಇರುತ್ತದೆ. ತದನಂತರ ಸರ್ವೇ ನಂ.46/1 ಮತ್ತು 46/2 ಎಂದು ಪೋಡಾಗಿರುತ್ತದೆ.

4) ಸರ್ವೇ ನಂ. 46 ರಲ್ಲಿರುವ 5 ಎಕರೆ 19 ಗುಂಟೆ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ - SBDS ರವರ ಜಮೀನು, ಪಶ್ಚಿಮಕ್ಕೆ- ಬಾಬಾಸಾಬ್ ರವರು ಜಮೀನು, ಉತ್ತರಕ್ಕೆ- ರಫಿ ಮತ್ತು ಚನ್ನಪ್ಪಶೆಟ್ಟಿ ರವರ ಜಮೀನು ಮತ್ತು ದಕ್ಷಿಣಕ್ಕೆ-ಹುಣಸೂರು ರಸ್ತೆ ಇತ್ತು. ಸರ್ವೇ ನಂ. 46 ನನ್ನ ತಂದೆಯ ಜೀವಂತ ಅವಧಿಯಲ್ಲಿ ಎರಡು ಪೋಡು ಆಗಿರುತ್ತದೆ.

5) ಸರ್ವೇ ನಂ. 46/1 ರಲ್ಲಿ 3 ಎಕರೆ 6 ಗುಂಟೆ ಆಸ್ತಿಯೂ ಒಟ್ಟು ವಿಸ್ತೀರ್ಣದ 5 ಎಕರೆ 19 ಗುಂಟೆಯೂ ಹುಣಸೂರು ರಸ್ತೆ ಕಡೆ ಬರುತ್ತದೆ. ಸರ್ವೇ ನಂ. 46/2 ಆಸ್ತಿಯೂ ಸರ್ವೇ ನಂ. 46/1 ಆಸ್ತಿಯ ಹಿಂಭಾಗದಲ್ಲಿ ಬರುತ್ತದೆ. ನನ್ನ ತಂದೆ ದೂಳಿಸತ್ಯನಾರಾಯಣ ಮಾರಾಟ ಮಾಡಿರುತ್ತಾರೆ. ನನ್ನ ತಂದೆ ದೂಳಿಸತ್ಯನಾರಾಯಣ ರವರಿಗೆ ಮಾರಾಟ ಮಾಡಿದ ಆಸ್ತಿಯ ಕ್ರಯ ಪತ್ರವನ್ನು ನಾನು ಓದಿಸಿ ತಿಳಿದುಕೊಂತಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ವಿಸ್ತೀರ್ಣ 2 ಎಕರೆ 6 ಗುಂಟೆ ಎಂದು ನಮೂದು ಇರುತ್ತದೆ. ಸದರಿ ಕ್ರಯ ಪತ್ರ ನಿಶಾನೆ ಪ-2 ಎಂದು ಈಗಾಗಲೇ ಗುರುತಿಸಲಾಗಿದ. ನಿಶಾನೆ ಪಿ-2 ಕ್ರಯಪತ್ರದಲ್ಲಿ ಮಾರಾಟ ಮಾಡಿದ ಆಸ್ತಿಯ ಚೆಕ್ಕುಬಂದಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ದಕ್ಷಿಣಕ್ಕೆ- ಹುಣಸೂರು ರಸ್ತೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಪೂರ್ವಕ್ಕೆ ಪಟೇಲ್ ರುದ್ರಪ್ಪ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಉತ್ತರಕ್ಕೆ- ಸಣ್ಣಕಾಳಯ್ಯ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸದರಿ ಚೆಕ್ಕುಬಂದಿಯಲ್ಲಿ 3 ಎಕರ 6 ಗುಂಟೆ ಎಂದು ನಮೂದಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

6) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಷಯಗಳು ನನಗೆ ತಿಳಿದಿರುತ್ತವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ತಂದೆ ದೂಳಿ ಸತ್ಯನಾರಾಯಣಶೆಟ್ಟಿ ರವರಿಗೆ 2 ಎಕರೆ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ವಿಷಯವನ್ನು ನನ್ನ ತಂದೆ ಮಾರಾಟ ಮಾಡಿದ ಕ್ರಯಪತ್ರವನ್ನು ನೋಡಿ ಬರೆಸಿರುತ್ತೇನೆ. ನಿಶಾನೆ ಪಿ-2 ಕ್ರಯ ಪತ್ರವನ್ನು ಹೊರತುಪಡಿಸಿ ನನ್ನ ತಂದೆ ಬೇರೆ ಕ್ರಯ ಪತ್ರ ಬರೆದುಕೊಟ್ಟಿರುವುದಿಲ್ಲ.

7) ಸರ್ವೇ ನಂ. 46/2 ರಲ್ಲಿ 2 ಎಕರೆ 4 ಗುಂಟೆ ಇರುತ್ತದೆ ಮತ್ತು 6 ಗುಂಟೆ ಖರಾಬು ಇರುತ್ತದೆ. 2 ವಿಸ್ತೀರ್ಣದ ಪಶ್ಚಿಮ ದಿಕ್ಕಿಗೆ 10 ಗುಂಟೆ ವಿಸ್ತೀರ್ಣ ಇರುತ್ತದೆ. ನಿಶಾನೆ ಪಿ-2 ಕ್ರಯ ಪತ್ರದಲ್ಲಿ 10 ಗುಂಟೆ ಉಳಿಸಿಕೊಂಡಿರುವ ಬಗ್ಗೆ ನಮೂದು ಇರುವುದಿಲ್ಲ. ಸದರಿ 10 ಗುಂಟೆಯ ಆಸ್ತಿಯ ಖಾತೆ ನನ್ನ ಹೆಸರಿನಲ್ಲಿ ಇರುವುದಿಲ್ಲ. ಸದರಿ 2 ಎಕರೆ 10 ಗುಂಟೆಯ ಆಸ್ತಿಯಲ್ಲಿ ಯಾರು ಸ್ವಾಧೀನ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ. 46/1 ರಲ್ಲಿರುವ 3 ಎಕರೆ 6 ಗುಂಟೆ ವಿಸ್ತೀರ್ಣದಲ್ಲಿ ನಾವು ವ್ಯವಸಾಯ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ವ್ಯವಸಾಯ ಮಾಡುತ್ತಿರುವ ಅಕ್ಕ ಪಕ್ಕದವರ ಹೆಸರುಗಳು ನನಗೆ ಗೊತ್ತಿರುತ್ತದೆ. ಈಗ ಸದರಿ ಆಸ್ತಿಯ ಬಾಜುದಾರರು ಯಾರು ಎಂದು ನನಗೆ ಗೊತ್ತಿರುವುದಿಲ್ಲ.

8) ನನ್ನ ತಂದೆ ದೂಳಿಸತ್ಯನಾರಾಯಣಶೆಟ್ಟಿ ರವರಿಗೆ ಸರ್ವೇ ನಂ. 46/1 ರಲ್ಲಿ 3 ಎಕರೆ 6 ಗುಂಟೆ ಆಸ್ತಿಯನ್ನು ವ್ಯವಸಾಯ ಮಾಡಲು ನೀಡಿರುವ ಬಗ್ಗೆ ದಾಖಲೆ ಇರುವುದಿಲ್ಲ. ನಾನು ಈ ದಾವೆಯಲ್ಲಿ ಕೇಳಿರುವ ಪರಿಹಾರಗಳ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಂದೆ ತೀರಿಕೊಳ್ಳುವ ಸಮಯಕ್ಕೆ ನನಗೆ 20 ವರ್ಷ ವಯಸ್ಸಾಗಿತ್ತು. ನನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಸರ್ವೇ ನಂ. 46/1 ಆಸ್ತಿಯ ಖಾತೆಯನ್ನು ಬದಲಾವಣೆ ಮಾಡಿಕೊಳ್ಳಲು ಪ್ರಯತ್ನಿಸಿದ್ದರೂ ಎಂದು ನಾನು ಹೇಳಿರುತ್ತೇನೆ ಎಂದರೆ

ಸರಿ. ದಿನಾಂಕ 30.09.2003 ರ ಕಾಲಕ್ಕೆ ದಾಖಲಾತಿಗಳಲ್ಲಿ ದೂಳಿಸತ್ಯನಾರಾಯಶೆಟ್ಟಿ ರವರ ಹೆಸರು ನಮೂದು ಆಗಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಆ ಸಮಯದಲ್ಲಿ ನಾನು ದೂಳಿಸತ್ಯನಾರಾಯಶೆಟ್ಟಿರವರ ಹೆಸರಲ್ಲಿರುವ ಕ್ರಯ ಪತ್ರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಕ್ರಯ ಪತ್ರದಲ್ಲಿ 3 ಎಕರೆ 6 ಗುಂಟೆ ವಿಸ್ತೀರ್ಣ ನಮೂದಾಗಿರುರುವ ಬಗ್ಗೆ ಗೊತ್ತಾಗಿರುತ್ತದೆ.

9) ದೂಳಿಸತ್ಯನಾರಾಯಶೆಟ್ಟಿ ರವರ ಪತ್ನಿಯ ಹೆಸರಿಗೆ ಖಾತೆ ಆಗಿರುವುದಿಲ್ಲ. ದೂಳಿಸತ್ಯನಾರಾಯಶೆಟ್ಟಿ ರವರ ಪತ್ನಿ ಸಾವಿತ್ರಮ್ಮ ರವರು ರಫೀ ಅಹಮ್ಮದ್ ಖಾನ್ ರವರಿಗೆ ಮಾರಾಟ ಮಾಡಿರುವ ಕ್ರಯ ಪತ್ರವನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಶಾನೆ ಪಿ-23 ಭೂ-ಪರಿವರ್ತನೆ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ